ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 22ನೇ ಸೆಪ್ಟಂಬರ್, 2020

ಲೇಔಟ್ ಮಾಡಿರುವ ಮಾಲೀಕರಿಂದ ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ಪರ್‌ಮೀಷನ್ ನೀಡದೆ ತೊಂದರೆ ಮಾಡುತ್ತಿರುವ ಬಗ್ಗೆ

ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

167 (167) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾರವಾರ ಜಿಲ್ಲೆಯ ಹಳಿಯಾಳ/ಜೋಯಿಡಾ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ನಿರ್ಮಿಸಲಾಗಿರುವ ಲೇಔಟ್‌ಗಳಾವುವು; (ಸ್ಥಳ, ಪ್ಲಾಟ್‌ಗಳ ವಿವರ, ಅದಕ್ಕೆ ಸಂಬಂಧಿಸಿದ ಹಕ್ಕುದಾರರು ಈ ಸ್ವತ್ತು ಮಾಡಿದ ಲೇಔಟ್‌ಗಳ ವಿವರಗಳನ್ನು ನೀಡುವುದು)

(ಆ) ಲೇಔಟ್ ಮಾಡಲು ಇರುವ ಮಾನದಂಡಗಳೇನು; ಎಷ್ಟು ಲೇಔಟ್‌ಗಳು ಅಧಿಕೃತವಾಗಿ ನೋಂದಾವಣಿಗೆ ಸಿದ್ಧವಾಗಿರುತ್ತವೆ; (ಸವಿಸ್ತಾರ ಮಾಹಿತಿ ನೀಡುವುದು)

(ಇ) ಅಭಿವೃದ್ಧಿ ಶುಲ್ಕ ತುಂಬದೇ ಇದ್ದಲ್ಲಿ ಸೈಟ್ ಮಾರಲು ನಗರ ಸಭೆ/ಪುರಸಭೆ ಅಧಿಕಾರಿಯವರು ಅನುಮತಿ ನೀಡಬಹುದೇ; ದಾಂಡೇಲಿ/ಹಳಿಯಾಳ ತಾಲ್ಲೂಕಿನ ಎಷ್ಟು ಲೇಔಟ್ ಮಾಲೀಕರು ಇಲ್ಲಿಯವರೆಗೆ ಅಭಿವೃದ್ಧಿ ಶುಲ್ಕ ತುಂಬಿರುತ್ತಾರೆ; ಎಷ್ಟು ಮಂದಿ ಲೇಔಟ್ ಮಾಲೀಕರು ಅಭಿವೃದ್ಧಿ ಶುಲ್ಕ ತುಂಬಬೇಕಾಗಿರುತ್ತದೆ; ಅಭಿವೃದ್ಧಿ ಶುಲ್ಕ ತುಂಬದೇ ಇರುವ ಸೈಟ್ ಮಾಲೀಕರಿಗೆ ಸೈಟ್ ಮಾರಲು ಅನುಮತಿ ನೀಡಲಾಗುವುದೇ; (ವಿವರ ನೀಡುವುದು)

(ಈ) ಈಗಾಗಲೇ ಸಾರ್ವಜನಿಕರ ದೂರಿನ ಪ್ರಕಾರ ಕೆಲವೊಂದು ಸೈಟ್ ಮಾಲೀಕರಿಗೆ ಅಭಿವೃದ್ಧಿ ಶುಲ್ಕ ತುಂಬಿಸಿಕೊಳ್ಳದೇ ಅನಧಿಕೃತವಾಗಿ ನೋಂದಣಿಗೆ ನಗರಸಭೆ/ಪುರಸಭೆ ಅಧಿಕಾರಿಗಳು ಅವಕಾಶ ಕಲ್ಪಿಸಿರುತ್ತಾರೆಂದು ತಿಳಿದು ಬಂದಿದ್ದು, ಈ ವಿಷಯದಲ್ಲಿ ಸರ್ಕಾರ ತನಿಖೆ ಮಾಡಿ ಈ ರೀತಿ ಅವ್ಯವಹಾರ ಮಾಡಿರುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದೇ; ಇಲ್ಲವೇ ಸದರಿ ವಿಷಯದಲ್ಲಿ ಖಾತರಿಪಡಿಸಿಕೊಳ್ಳಲು ಸಂಬಂಧಿಸಿದ ಜಿಲ್ಲಾಧಿಕಾರಿಯಿಂದ ತನಿಖೆ ಮಾಡಿಸಲಾಗುವುದೇ? (ವಿವರ ನೀಡುವುದು)